ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಶುಕ್ರವಾರ, ದಿನಾಂಕ : 13 ನೇ ಮಾರ್ಚ್, 2020

ರಾಜ್ಯದ ಸಾರಿಗೆ ನಿಗಮಗಳ ನೌಕರರ ವರ್ಗಾವಣೆ ಕುರಿತು

ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ(ನಾಮನಿರ್ದೇಶನ ಹೊಂದಿದವರು):-

907 (1131) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ವಿವಿಧ ರಸ್ತೆ ಸಾರಿಗೆ ನಿಗಮಗಳ ನೌಕರರ ವರ್ಗಾವಣೆ ನೀತಿಯು ಯಾವಾಗ ಜಾರಿಗೆ ಬಂದಿದೆ ;

(ಆ) ಒಂದು ನಿಗಮದಿಂದ ಇನ್ನೊಂದು ನಿಗಮಕ್ಕೆ ನೌಕರರು ವರ್ಗಾವಣೆ ಹೊಂದಲು ನೀಡಿರುವ ಮಾನದಂಡಗಳೇನು ;

(ಇ) ಸಾರಿಗೆ ಕಾರ್ಮಿಕರು ತಮ್ಮ ಮಾತೃ ಜಿಲ್ಲೆಗೆ ವರ್ಗಾವಣೆ ಬಯಸುವುದು ನ್ಯಾಯ ಸಮ್ಮತವೆಂದು ಸರ್ಕಾರ ಭಾವಿಸಿದೆಯೇ;

(ಈ) ಅಂತಹ ನೌಕರರನ್ನು ಮಾತೃ ಜಿಲ್ಲೆಗೆ ವರ್ಗಾವಣೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೆ ?